## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ,
## ಕೊಡಗು, ಮಡಿಕೇರಿ.

ಅಧಿಸೂಚನೆ ಸಂಖ್ಯೆ : 01/2017 (ನೋಟರಿ) ದಿನಾಂಕಃ **28.12.2017.**

**ವಿಷಯಃ-** ಕೊಡಗು ಜಿಲ್ಲೆ, ಸೋಮವಾರಪೇಟೆ ಕಂದಾಯ ತಾಲ್ಲೂಕಿನಲ್ಲಿ ಹೆಚ್ಚುವರಿಯಾಗಿ ಸೃಜಿಸಲಾಗಿರುವ ಒಂದು (01) ನೋಟರಿ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖಃ-** 1. **ಸರ್ಕಾರಿ ಆದೇಶ ಸಂಃಲಾ** 234 **ಎಲ್‌ಸಿಎಲ್** 2016**, ಬೆಂಗಳೂರು, ದಿನಾಂಕಃ** 06.09.2016 ಮತ್ತು 08.12.2017.

2. ಕಛೇರಿ ಟಿಪ್ಪಣಿಯ ಮೇಲಿನ ಆದೇಶದ ದಿಃ 28.12.2017.

✠✠✠✠

ಉಲ್ಲೇಖ-1 ರಂತೆ ಕೊಡಗು ಜಿಲ್ಲೆಯ ಸೋಮವಾರಪೇಟೆ ಕಂದಾಯ ತಾಲ್ಲೂಕಿಗೆ 01 ನೋಟರಿ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸಿದ್ದು ಈ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಅಧಿಸೂಚನೆ ಹೊರಡಿಸಿ ನೋಟರಿಯ ನಿಯಮಗಳು 1956 ರ ನಿಯಮ 6(1)(2) ಮತ್ತು 7(1)(2)(3) ರನ್ವಯ ಹಾಗೂ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 12 ರನ್ವಯ ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ.

ಅದರಂತೆ ನೋಟರಿ ನಿಯಮಗಳು 1956 ರ ನಿಯಮ 3 ರಂತೆ ಅರ್ಹವಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಫಾರಂ–01 ಮೆಮೋರಿಯಲ್ (ರೂಲ್ 4(2)ರನ್ವಯ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲೆ ಪ್ರತಿಯೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕಃ 02.01.2018 ಮತ್ತು ಕಡೆಯ ದಿನಾಂಕ :01.02.2018 ಸಂಜೆ 5.00 ಗಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸಃ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,<br>ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,<br>ಕೊಡಗು-ಮಡಿಕೇರಿ.

**ಸರ್ಕಾರದಿಂದ ಹೆಚ್ಚುವರಿಯಾಗಿ ಸೃಜಿಸಿದ ನೋಟರಿ ಹುದ್ದೆಗಳ ಸಂಖ್ಯೆ**

| ಕ್ರ.ಸಂ | ಕಂದಾಯ **ತಾಲ್ಲೂಕು** | ಹುದ್ದೆಗಳ ಸಂಖ್ಯೆ |
|---|---|---|
| 1 | ಸೋಮವಾರಪೇಟೆ | 1 |
| | ಒಟ್ಟು | **1** |

ಪ್ರಮುಖ ಸೂಚನೆಗಳುಃ-

1. ಈ ಅಧಿಸೂಚನೆಯೊಂದಿಗೆ ಲಗತ್ತಿಸುವ ಫಾರಂ 1 ಮೆಮೋರಿಯಲ್ (ರೂಲ್ 4(2) ರನ್ವಯ ಅರ್ಜಿದಾರರು ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲೆ ಪ್ರತಿಗಳೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.
2. ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಅಪೂರ್ಣವಾಗಿರುವ, ಭರ್ತಿ ಮಾಡದ ಮತ್ತು ವಿದ್ಯಾರ್ಹತೆ /ಇನ್ನಿತರ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅರ್ಜಿದಾರರು ಸಲ್ಲಿಸುವ ಅರ್ಜಿಗಳು ನೋಟರಿಗಳ ನಿಯಮಗಳು 1956ರ ನಿಯಮ 6(1)(2) ಮತ್ತು 7(1)(2)(3) ರನ್ವಯ ಹಾಗೂ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977ರ ನಿಯಮ 12 ರನ್ವಯ ಪರಿಶೀಲನೆಗೆ ಒಳಪಟ್ಟಿರುತ್ತವೆ.

ತಮ್ಮ ವಿಶ್ವಾಸಿ

Sd/-
(ಮಾಸ್ಟರ್ ಆರ್‌ಕೆಜಿಎಂಎಂ ಮಹಾಸ್ವಾಮೀಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.

ಪ್ರತಿಯನ್ನುಃ
ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ
(ಆಡಳಿತ –2), ವಿಧಾನ ಸೌಧ, ಬೆಂಗಳೂರು.

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ** ಃ-

1. ಜಿಲ್ಲಾ ನ್ಯಾಯಾಲಯದ ಘಟಕದ ಎಲ್ಲಾ ಅಧೀನ ನ್ಯಾಯಾಲಯಗಳ ಸೂಚನಾ ಫಲಕಕ್ಕೆ.
2. ಅಧ್ಯಕ್ಷರು, ವಕೀಲರ ಸಂಘ, ಮಡಿಕೇರಿ /ವಿರಾಜಪೇಟೆ/ಸೋಮವಾರಪೇಟೆ/ ಪೊನ್ನಂಪೇಟೆ/ಕುಶಾಲನಗರ - ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು.
3. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ಕೊಡಗು-ಮಡಿಕೇರಿ ಇವರಿಗೆ ವ್ಯಾಪಕ ಪ್ರಚಾರಕ್ಕಾಗಿ.
4. ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ.
5. ಕಛೇರಿಯ ಕಡತಕ್ಕೆ